# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮ ಕಾರ್ಯಾಲಯ
ಕಾವೇರಿ ಭವನ
ಬೆಂಗಳೂರು-560 009.

ಕವಿಪ್ರನಿನಿ/ಬಿ9/19282/15-16

## ಸುತ್ತೋಲೆ

ದಿನಾಂಕ : 14 JUL 2015

ವಿಷಯ:- ಇ-ತ್ಯಾಜ್ಯ (ನಿರ್ವಹಣೆ ಮತ್ತು ನಿಭಾವಣೆ) ನಿಯಮ 2011 ರ ನಿಬಂಧನೆ / ಷರತ್ತುಗಳನ್ನು ಅನುಸರಿಸುವ ಬಗ್ಗೆ.

ಉಲ್ಲೇಖ:-1. ಇ-ತ್ಯಾಜ್ಯ (ನಿರ್ವಹಣೆ ಮತ್ತು ನಿಭಾವಣೆ) ನಿಯಮ 2011.

2. ಜಂಟಿ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ ಹೆಚ್ ಎಸ್ ಎಂ ವಿಭಾಗ ರವರ ಕಚೇರಿ ಜ್ಞಾಪನ ಸಂಖ್ಯೆ 12-16/2013-ಹೆಚ್ ಎಸ್ ಎಂ ಡಿ ದಿನಾಂಕ 12/02/2015.
3. ಸರ್ಕಾರದ ಕಾರ್ಯದರ್ಶಿ (ಪರಿಸರ ಮತ್ತು ಜೀವಿಶಾಸ್ತ್ರ) ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರ ಸುತ್ತೋಲೆ ಸಂಖ್ಯೆ ಅ.ಪ.ಜೀ.46 ಇ ಎಸ್ ವಿ 2015 ದಿನಾಂಕ 22/04/2015.

ಸರ್ಕಾರದ ಕಾರ್ಯದರ್ಶಿ (ಪರಿಸರ ಮತ್ತು ಜೀವಿಶಾಸ್ತ್ರ), ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ರವರ ದಿನಾಂಕ 22/04/2015 ರ ಸುತ್ತೋಲೆಯಲ್ಲಿ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳನ್ನು ಸಮಾಜದ ಎಲ್ಲಾ ಸ್ಥಳದಲ್ಲೂ ಮತ್ತು ಎಲ್ಲಾ ಸ್ತರದಲ್ಲೂ ಬಳಸಲಾಗುತ್ತಿದ್ದು, ಬಳಕೆಯ ನಂತರ ಈ ಉಪಕರಣಗಳನ್ನು ಅಸಮರ್ಪಕವಾಗಿ ವಿಲೇವಾರಿ ಮಾಡುತ್ತಿರುವುದರಿಂದ ಇ-ತ್ಯಾಜ್ಯವು ಶೇಕರಣೆಗೊಂಡು ಪರಿಸರವು ಕಲುಷಿತಗೊಳ್ಳುತ್ತಿದೆಯೆಂದು ತಿಳಿಸಲಾಗಿದೆ. ಈ ಸಂಬಂಧ, ಕೇಂದ್ರ ಸರ್ಕಾರದ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ಇ-ತ್ಯಾಜ್ಯ (ನಿರ್ವಹಣೆ ಮತ್ತು ನಿಭಾವಣೆ) ನಿಯಮ 2011 ರಲ್ಲಿ ಇ-ತ್ಯಾಜ್ಯ ವಿಲೇವಾರಿ ಬಗ್ಗೆ ನಿಯಮಾವಳಿಗಳನ್ನು ಹೊರಡಿಸಿರುತ್ತದೆ. ಸದರಿ ನಿಯಮಾವಳಿಗಳ ನಿಯಮ 16 ರಲ್ಲಿ ಇ-ತ್ಯಾಜ್ಯವನ್ನು ಅಂತಿಮ ವಿಲೇಗೊಳಿಸುವ ಬಗ್ಗೆ, ಕೈಗೊಳ್ಳಬೇಕಾಗಿರುವ ನಿರ್ವಹಣೆಯ ವಿವರವನ್ನು ವಿವರಿಸಲಾಗಿದೆ.

ಪ್ರಸ್ತುತ, ಕೇಂದ್ರ ಸರ್ಕಾರವು ಸದರಿ ಕಾಯ್ದೆಯ "bulk Consumer" ವ್ಯಾಖ್ಯಾನದಡಿ ಬರುವಂತಹ ರಾಜ್ಯ ಸರ್ಕಾರದ ವಿವಿದ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು, ಸ್ವಾಯತ್ತ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು, ಮಂಡಳಿಗಳು, ಸಂಸ್ಥೆಗಳು ಇ-ತ್ಯಾಜ್ಯ (ನಿರ್ವಹಣೆ ಮತ್ತು ನಿಭಾವಣೆ) ನಿಯಮಾವಳಿ 2011 ರ ನಿಯಮ 16 ರನ್ವಯ, ತಮ್ಮ ವ್ಯಾಪ್ತಿಯಲ್ಲಿ ಉದ್ಭವಿಸಬಹುದಾದಂತಹ ಇ-ತ್ಯಾಜ್ಯಗಳನ್ನು ನಿಗಧಿತ ಘಟಕಗಳಲ್ಲಿ ಅಂಗೀಕರಿಸಲಾಗಿರುವ ಇ-ತ್ಯಾಜ್ಯ ಸ್ವೀಕರ್ತನಾ ಘಟಕಗಳು ಅಥವಾ ನೋಂದಾಯಿತ ನಿರ್ವಸನ ಮಾಡುವವರು ಅಥವಾ ಪುನರ್ ಬಳಕೆ ಮಾಡುವವರು ಅಥವಾ ತಯಾರಕರಿಗೆ ಹಿಂದಿರುಗಿಸುವ ಬಗ್ಗೆ, ತಮ್ಮ ಇಲಾಖೆ/ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಟ್ಟುನಿಟ್ಟಾಗಿ ಕೂಡಲೇ

EE (IT)
EE (...)
DC...
SEE (...)
14/7/15

AEE-I
15/7/2015

ಕ್ರಮ ವಹಿಸಲು ಸೂಚಿಸಿದೆ. ಈ ಸುತ್ತೋಲೆಯೊಂದಿಗೆ ಉಲ್ಲೇಖದ ಪತ್ರಗಳ ಪ್ರತಿಯನ್ನು ಮಾಹಿತಿಗಾಗಿ ಲಗತ್ತಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ನಿಗಮದ ವಿವಿಧ ಕಚೇರಿಗಳ ವ್ಯಾಪ್ತಿಯಲ್ಲಿ ಉದ್ಭವಿಸಬಹುದಾದಂತಹ ಇ-ತ್ಯಾಜ್ಯಗಳನ್ನು ಸಮರ್ಪಕವಾಗಿ ಸದರಿ ನಿಬಂಧನೆ / ಷರತ್ತುಗಳನ್ನು ಅನುಸರಿಸಿ, ವಿಲೇವಾರಿ ಮಾಡಲು ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ.

Sudha 13/7/15

ಉಪ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ. ಬೆಂಗಳೂರು.

ಪ್ರತಿಗಳು:-

1. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಎಲ್ಲಾ ಅಧೀಕ್ಷಕ ಇಂಜಿನಿಯರುಗಳು (ವಿ), ಕವಿಪ್ರನಿನಿ.
4. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
5. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ ಮತ್ತು ಎಂಐಎಸ್), ಕವಿಪ್ರನಿನಿ, ಕಾವೇರಿ ಭವನ, ಸದರಿ ಸುತ್ತೋಲೆಯನ್ನು ನಿಗಮದ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಕೋರಿದೆ.
6. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ) / (ಸಿವಿಲ್), ಕವಿಪ್ರನಿನಿ.
7. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ (ಹಣಕಾಸು)/ (ಆ ಮತ್ತು ಮಾ.ಸಂ)/(ಆರ್ ಎ) ಮತ್ತು ಕಂ.ಕಾ ಇವರುಗಳ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.